# ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ಹ.ಬ.ವಿವಾದ: 95/2014-15 ದಿ:27-05-2016

ಉಪಸ್ಥಿತರು: ಪಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಶ್ರೀದೇವಿ ಗಂಡ: ಮಹಾನಂದಿಗೌಡ
ಶಾನವಾಸಪುರ ಗ್ರಾಮ ಸಿರುಗುಪ್ಪ ತಾಲೂಕ
2) ಮಹಾನಂದಿಗೌಡ ತಂದೆ: ಪೊಂಪನಗೌಡ
ಶಾನವಾಸಪುರ ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಶಾಂತಲಾ ಅಲಿಯಾಸ್ ಅಂಗಡಿ ಸಿದ್ದಲಿಂಗಮ್ಮ
ಗಂಡ: ಮಹಾನಂದಿಗೌಡ, ಅರಳಿಗನೂರುಗ್ರಾಮ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಶಾನವಾಸಪುರ ಗ್ರಾಮ | 67/1 | 9-49 | H-38/2013-14 | 111/2013-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಶಾನವಾಸಪುರ ಗ್ರಾಮದ** ಸ.ನಂ.**67/1** ವಿಸ್ತೀರ್ಣ **9-49 ಸೆಂಟ್ಸ್** ಜಮೀನಿಗೆ ಸಂಭಂದಿಸಿದಂತೆ ,ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ನಂ: **SRG-1-05215/2013-14 Dt.3-1-2014** ರ ದಾನಪತ್ರ ನೊಂದಣಿಯಾದ ಪ್ರಕಾರ ರಂದು ಶ್ರೀದೇವಿ ;ಗಂಡ: ಮಹಾನಂದಿನಗೌಡ, **ಶಾನವಾಸಪುರ ಗ್ರಾಮ ಇವರ ಹೆಸರಿನಲ್ಲಿ** ಖಾತೆಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಶಾಂತಲಾ ಅಲಿಯಾಸ್** ಅಂಗಡಿ ಸಿದ್ದಲಿಂಗಮ್ಮ ಗಂಡ: **ಮಹಾನಂದಿಗೌಡ ಅರಳಿಗನೂರು ಗ್ರಾಮ ಇವರು ದಿ:27-01-2014** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **13-7-2015, 15-10-2015, 8-3-2016, 21-3-2016, 13-5-2016 ಮತ್ತು 20-5-2016** ರಂದು **ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದ್ಗವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ ಶ್ರೀದೇವಿ ಗಂಡ:ಮಹಾನಂದಿಗೌಡ, ಶಾನವಾಸಪುರ ಗ್ರಾಮ ಇವರು ಶಾನವಾಸಪುರ ಗ್ರಾಮದ ಸ.ನಂ. 67/1 ವಿಸ್ತೀರ್ಣ 9-49 ಸೆಂಟ್ಸ್ ಜಮೀನು ನನ್ನ ಗಂಡನಾದ ಮಹಾನಂದಿ ಗೌಡ ತಂದೆ: ಪೊಂಪನಗೌಡ, ಶಾನವಾಸಪುರಗ್ರಾಮ ಇವರ ಹೆಸರಿನಲ್ಲಿ ಪಟ್ಟಇದ್ದು ಶ್ರೀದೇವಿ ಗಂಡ: ಮಹಾನಂದಿಗೌಡ ನನ್ನ ಹೆಸರಿಗೆ ಸಿರುಗುಪ್ಪ ಉಪನೊಂದಣಿ ಕಛೇರಿ ಪತ್ರ ನಂ: 5215/13-14 ದಿ:3-1-2014 ರಲ್ಲಿ ದಾನಪತ್ರ ನೊಂದಣಿ ಮಾಡಿದ್ದು ಪಟ್ಟ ವರ್ಗಾವಣೆ ಮಾಡುವ ಸಮಯದಲ್ಲಿ ಶಾಂತಲ ಅಲಿಯಾಸ್ ಅಂಗಡಿ ಸಿದ್ದಲಿಂಗಮ್ಮ ಗಂಡ: ಮಹಾನಂದಿಗೌಡ ಇವರು ದಿ:27-1-2014 ರಂದು ತಕರಾರು ಅರ್ಜಿಸಲ್ಲಿಸಿರುತ್ತಾರೆ. ದೊಡ್ಡ ಮನುಷ್ಯರು ಪಂಚಾಯಿತಿ ನಿರ್ವಹಿಸಿ ಪರಿಷ್ಕಾರ ಮಾಡಿದ ಪ್ರಕಾರ ಶಾನವಾಸಪುರ ಗ್ರಾಮದ ಸ.ನಂ. 68/2 ವಿಸ್ತೀರ್ಣ 3-00 ಎಕರೆ ಜಮೀನು ಶಾಂತಲ ಇವರಿಗೆ ಅವರ ಮಕ್ಕಳಾದ ಎಸ್. ಚಂದ್ರಿಕ ಇವರಿಗೆ ಸ.ನಂ. 68/6 ವಿಸ್ತೀರ್ಣ 3-00 ಎಕರೆ ಹಾಗೂ ಎಸ್. ರೇಖ ಇವರಿಗೆ ಸ.ನಂ. 68/5 ವಿಸ್ತೀರ್ಣ 3-00 ಎಕರೆ ಜಮೀನು ಬಿಟ್ಟುಕೊಟ್ಟ ಬಗ್ಗೆ ಪರಸ್ಪರ ಒಪ್ಪಿ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದ ಪ್ರಕಾರ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಶಾಂತಲ ಅಲಿಯಾಸ್ ಅಂಗಡಿಸಿದ್ದಲಿಂಗಮ್ಮ, ಗಂಡ: ಮಹಾನಂದಿಗೌಡ, ಅರಳಿಗನೂರು ಗ್ರಾಮ, ಸಿರುಗುಪ್ಪ ತಾಲೂಕ ಇವರು ಶಾನವಾಸಪುರ ಗ್ರಾಮದ ಸ.ನಂ.67/1 ವಿಸ್ತೀರ್ಣ 9-49 ಸೆಂಟ್ಸ್ ಜಮೀನು ನನ್ನ ಗಂಡನಾದ ಮಹಾನಂದಿಗೌಡ ತಂದೆ: ಪೊಂಪನಗೌಡ ಶಾನವಾಸಪುರ ಇವರ ಹೆಸರಿನಲ್ಲಿ ಪಟ್ಟ ಇದ್ದು ನನ್ನ ಗಂಡನವರು ಶ್ರೀದೇವಿ ಗಂಡ: ಮಹಾನಂದಿಗೌಡ ಇವರ ಹೆಸರಿಗೆ ಸಿರುಗುಪ್ಪ ಉಪನೊಂದಣಿ ಕಛೇರಿ ಪತ್ರ ನಂ: 5215/13-14 ದಿ:3-1-2014 ರಲ್ಲಿ ದಾನಪತ್ರ ನೊಂದಣಿ ಮಾಡಿದ್ದು ಪಟ್ಟ ವರ್ಗಾವಣೆ ಮಡುವ ಸಮಯದಲ್ಲಿ ದಿ:27-1-2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತೇನೆ. ದೊಡ್ಡ ಮನುಷ್ಯರು ಪಂಚಾಯಿತಿ ನಿರ್ವಹಿಸಿ ಪರಿಷ್ಕಾರ ಮಾಡಿದ ಪ್ರಕಾರ ನನಗೆ ಶಾನವಾಸಪುರ ಗ್ರಾಮದ ಸ.ನಂ.68/2 ವಿಸ್ತೀರ್ಣ 3-00 ಎಕರೆ ಜಮೀನು, ನನ್ನ ಮಕ್ಕಳಾದ ಎಸ್. ಚಂದ್ರಿಕ ಇವರಿಗೆ ಸ.ನಂ. 68/6 ವಿಸ್ತೀರ್ಣ 3-00 ಎಕರೆ ಹಾಗೂ ಎಸ್. ರೇಖ ಇವರಿಗೆ ಸ.ನಂ. 68/5 ವಿಸ್ತೀರ್ಣ 3-00 ಎಕರೆ ಜಮೀನು ಬಿಟ್ಟುಕೊಟ್ಟಿರುತ್ತಾರೆ. ಆದ್ದರಿಂದ ಪರಸ್ಪರ ಒಪ್ಪಿ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುತ್ತೇನೆ. ದಾನ ನೊಂದಣಿ ಪ್ರಕಾರ ಪಟ್ಟ ವರ್ಗಾವಣೆ ಮಾಡಬಹುದೆಂದು ಇನ್ನು ಮುಂದೆ ನಾನು ಯಾವುದೇ ಆಕ್ಷೇಪಣೆ ಗಳನ್ನು ಮಾಡುವುದಿಲ್ಲವೆಂದು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪತ್ರ ನಂ: 5215/13-14 ದಿ: 3-1-2014 ರ ದಾನಪತ್ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಶಾನವಾಸಪುರಗ್ರಾಮದ ಸ.ನಂ.67/1 ವಿಸ್ತೀರ್ಣ 09-49ಸೆಂಟ್ಸ್ ಜಮೀನು ಸಿರುಗುಪ್ಪ ಉಪನೊಂದಣಿ ಕಛೇರಿ **SRG-1-05215/ 2013-14 Dt.3-1-2014** ರ ದಾನಪತ್ರ ಪ್ರಕಾರ ಶ್ರೀದೇವಿ ಗಂಡ: ಮಹಾನಂದಿಗೌಡ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:27-05-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು,
ಸಿರುಗುಪ್ಪ ತಾಲೂಕು

ನಾಡ ಕಾರ್ಯಾಲಯ, ಕರೂರು, ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು: